# ಕರ್ನಾಟಕದಲ್ಲಿ ಸ್ವಾಮಿ ವಿವೇಕಾನಂದರು

ಸ್ವಾಮಿ ಕರುಣಾಕರಾನಂದ

**ಕರ್ನಾಟಕದಲ್ಲಿ ಇಂದು ಬೆಳೆದು ನಿಂತಿರುವ ರಾಮಕೃಷ್ಣ ಆಂದೋಲನಕ್ಕೆ ನಾಂದಿಯನ್ನು ಹಾಕಿದವರು ಸ್ವಾಮಿ ವಿವೇಕಾನಂದರೇ. ಅವರು ಪರಿವ್ರಾಜಕರಾಗಿದ್ದಾಗ ಬೆಳಗಾವಿ, ಬೆಂಗಳೂರು ಮತ್ತು ಮೈಸೂರು ನಗರಗಳಿಗೆ ನೀಡಿದ ಭೇಟಿಯ ಮಹತ್ವದ ಮಜಲುಗಳನ್ನು ವಿವರಿಸಿರುವ ಸ್ವಾಮೀಜಿಯವರು ಮೈಸೂರಿನ ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.**

## ಬೆಳಗಾವಿಯಲ್ಲಿ



**ಭಾ**ರತದ ಅನೇಕ ರಾಜ್ಯಗಳಲ್ಲಿ ತಮ್ಮ ಪರಿವ್ರಾಜಕ ಜೀವನವನ್ನು ನಡೆಸುತ್ತ, ಸ್ವಾಮಿ ವಿವೇಕಾನಂದರು ೧೮೯೨ ಅಕ್ಟೋಬರ್ ೧೫ ರಂದು ಬೆಳಗಾವಿಗೆ ಕಾಲಿಡುವುದರೊಂದಿಗೆ, ಕರ್ನಾಟಕವನ್ನು ಪ್ರವೇಶಿಸಿದರು. ಮಹಾರಾಷ್ಟ್ರದ ಕೊಲ್ಲಾಪುರದಿಂದ ಹೊರಟ ಸ್ವಾಮೀಜಿಯವರು ಅಲ್ಲಿನ ಮಹಾರಾಜರ ಆಪ್ತಕಾರ್ಯದರ್ಶಿಯಿಂದ ಬೆಳಗಾವಿಯ ಶ್ರೀಯುತ ಭಾಟೆ ಎಂಬುವವರಿಗೆ ಪರಿಚಯಪತ್ರವನ್ನು ತಂದಿದ್ದರು. ಸ್ವಾಮಿಗಳ ಬಗ್ಗೆ ತಮ್ಮದೇ ಆದ ಪರಿಕಲ್ಪನೆಯನ್ನು ಹೊಂದಿದ್ದ ಭಾಟೆಯವರು ಇವರ ವೇಷಭೂಷಣಗಳನ್ನು, ಭಾಷಾಶೈಲಿಯನ್ನೂ ಕಂಡು ಅಚ್ಚರಿಗೊಂಡರು. ಬೇರೆ ಸಂಪ್ರದಾಯಸ್ಥ ಸಂನ್ಯಾಸಿಗಳಂತೆ ಕಾವಿಯನ್ನು ಧರಿಸಿದ್ದರೂ, ಸುಲಲಿತವಾಗಿ ಇಂಗ್ಲಿಷ್ ಭಾಷೆಯನ್ನು ಮಾತನಾಡಬಲ್ಲವರಾಗಿದ್ದ ಸ್ವಾಮೀಜಿ ಸ್ವಲ್ಪ ಮಾತನಾಡುವುದರಲ್ಲೇ, ಭಾಟೆಯವರ ಮನೆಯವರಿಗೆ ಅವರ ವಿಶಾಲಜ್ಞಾನ ಹಾಗೂ ಅಪಾರ ಬುದ್ಧಿಮತ್ತೆಗಳ ಪರಿಚಯವಾಯಿತು.

ಸ್ವಾಮೀಜಿಯೊಂದಿಗೆ ಸಂಭಾಷಣೆ ನಡೆಸಲು ಆ ಊರಿನ ಕಾರ್ಯನಿರ್ವಾಹಕ ಇಂಜಿನೀರ್ ಒಮ್ಮೆ ಬಂದ. ಆತ ಆ ಊರಿನಲ್ಲೇ ಹೆಚ್ಚು ತಿಳಿದವನೆಂಬ ಹೆಸರು ಗಳಿಸಿದ್ದ. ಹೊರಗೆ ನಿಷ್ಠಾವಂತ ಸಂಪ್ರದಾಯಸ್ಥನಾಗಿದ್ದಾಗ್ಯೂ ಒಳಗೊಳಗೆ ಆತ ಸಂದೇಹವಾದಿ. ಈತ ಸ್ವಾಮೀಜಿಗೆ ಧರ್ಮದ ಕುರಿತಾದ ಅನೇಕ ಪ್ರಶ್ನೆಗಳನ್ನು ಕೇಳಿದ. ಅವುಗಳಲ್ಲಿ ಇದೊಂದು ಉದಾಹರಣೆ. "ಸ್ವಾಮೀಜಿ, ಈ ಧಾರ್ಮಿಕ ಆಚರಣೆಗಳಲ್ಲಿ ಏನೂ ಹುರುಳಿಲ್ಲವೆಂದೇ ನನಗನಿಸುತ್ತದೆ. ಎಷ್ಟೋ ವರ್ಷಗಳಿಂದ ನಡೆದುಕೊಂಡ ಬಂದ ಸಂಪ್ರದಾಯವೇ ಕಾಲಕಳೆದಂತೆ ಧರ್ಮ ಎಂದೆನಿಸುತ್ತದೆ" ಎಂದು ತನ್ನ ಸಂಶಯವನ್ನು ಮುಂದಿಟ್ಟ ಇಂಜಿನೀರ್. ಅದಕ್ಕೆ ಉತ್ತರಿಸುತ್ತ ಸ್ವಾಮೀಜಿ ಹೇಳುತ್ತಾರೆ, "ಒಂದು ಸ್ವಲ್ಪವಾದರೂ ಆಧ್ಯಾತ್ಮಿಕ ಅನುಭವವಿಲ್ಲದ ಧಾರ್ಮಿಕ ಜೀವನವೆಂದರೆ ಅದೆಂಥ ಧಾರ್ಮಿಕ ಜೀವನ! ಅಂಥವನಿಗಿಂತ ಒಬ್ಬ ಪ್ರೇತವನ್ನು ಕಂಡವನಾದರೂ ಎಷ್ಟೋ ಮೇಲು." ಧರ್ಮವೆಂದರೆ ಇಂದ್ರಿಯಾತೀತವಾದ ಸತ್ಯವನ್ನು ಸಾಕ್ಷಾತ್ಕರಿಸಿಕೊಳ್ಳುವುದೆಂದೇ ಸ್ವಾಮೀಜಿಯವರ ಅಭಿಪ್ರಾಯ. ಹೀಗೆ ಅವನು ಕೇಳಿದ ಪ್ರಶ್ನೆಗಳಿಗೆಲ್ಲ ತರ್ಕಬದ್ಧವಾಗಿ, ವೈಜ್ಞಾನಿಕವಾಗಿ, ಅನುಭವದ ಆಧಾರದ ಮೇಲೆ ಉತ್ತರವನ್ನು ನೀಡಿ, ಅವನನ್ನು ಸುಮ್ಮನಿರಿಸಿದಾಗ ಆ ಇಂಜಿನೀರ್‌ಗೆ ಸ್ವಾಮಿಗಳ ಮೇಲೆ ಅಸಾಧ್ಯ ಕೋಪ ಬಂದು. ಅವರೊಂದಿಗೆ ಅವಿನಯದಿಂದ ವರ್ತಿಸಲಾರಂಭಿಸಿದ. ಆಗ ಸ್ವಾಮೀಜಿಯ ಆತಿಥೇಯರಾದ ಭಾಟೆಯವರು ಅದನ್ನು ಸಹಿಸದೆ ಪ್ರತಿಭಟಿಸಿದರು. ತಕ್ಷಣ ಸ್ವಾಮೀಜಿ ಮಧ್ಯೆ ಪ್ರವೇಶಿಸಿ, "ಇರಲಿ ಬಿಡಿ, ಪರವಾಗಿಲ್ಲ" ಎನ್ನುತ್ತ ಅವರನ್ನು ಸಮಾಧಾನಗೊಳಿಸಿದರು.

೧೮೯೨, ಅಕ್ಟೋಬರ್ ೧೮, ಮಂಗಳವಾರ, ಭಾಟೆಯವರು ಅಲ್ಲಿನ ಒಬ್ಬ ಅರಣ್ಯಾಧಿಕಾರಿಯಾದ ಹರಿಪದ ಮಿತ್ರ ಎಂಬುವವನ ಮನೆಗೆ ಸ್ವಾಮಿ ವಿವೇಕಾನಂದರನ್ನು ಕರೆದುಕೊಂಡು ಹೋಗಿ ಅವನಿಗೆ ಪರಿಚಯ ಮಾಡಿಸಿದರು. ಒಳ್ಳೆ ವಿದ್ಯಾವಂತ, ಬುದ್ಧಿವಂತನಾದರೂ ಹರಿಪದನಿಗೆ ಧರ್ಮ, ದೇವರುಗಳೆಂದರೆ ಅಷ್ಟಕ್ಕಷ್ಟೆ! ಎಲ್ಲ ಸಾಧುಗಳನ್ನು ಠಕ್ಕರೆಂಬಂತೆ ಕಾಣುತ್ತಿದ್ದ. ಆದರೆ, ಸ್ವಾಮೀಜಿಯನ್ನು ನೋಡುತ್ತಿದ್ದಂತೆ ಅವರ ಶಾಂತ ಮುಖಮುದ್ರೆ, ಮಿಂಚಿನಂತೆ ಮಿನುಗುವ ಕಣ್ಣುಗಳು, ಆಕರ್ಷಕ ವ್ಯಕ್ತಿತ್ವ – ಇವುಗಳಿಂದ ಅವನು ಮುಗ್ಧನಾದ. ಮೊದಮೊದಲು ಅವರು ಬಂಗಾಲಿಗಳೆಂದು ತಿಳಿದಾಗ ಅವನ ಮನಸ್ಸಿಗೆ ಹೊಳೆದದ್ದು, "ಬಹುಶಃ ಈ ಬಂಗಾಲಿ ಸಂನ್ಯಾಸಿಗೆ ಮರಾಠಿಗರ ಮನೆ ಸರಿಬರಲಿಲ್ಲವೇನೊ! ಅದಕ್ಕಾಗಿ ಈಗ ಬಂಗಾಲಿಯೊಬ್ಬನ ಮನೆಯನ್ನು ಹುಡುಕಿಕೊಂಡು ಬಂದಿದ್ದಾನೆ!" ಎಂಬುದಾಗಿ. ಆದರೆ, ಸ್ವಾಮೀಜಿಯವರೊಂದಿಗೆ ಹತ್ತು ನಿಮಿಷ ಮಾತನಾಡುವುದರಲ್ಲಿ ಅವರ ಜ್ಞಾನವೈಶಾಲ್ಯದ ಪರಿಚಯವಾಗಿ ಅತ್ಯಂತ ಪ್ರಭಾವಿತನಾದ.

ಕೊನೆಗೆ ತನ್ನ ಮನೆಗೆ ಬಂದಿರಬೇಕೆಂದು ಕೇಳಿಕೊಂಡಾಗ ಸ್ವಾಮೀಜಿ ಹೇಳಿದರು, "ನನಗೆ ಈ ವಕೀಲರ ಮನೆಯೇ ಚೆನ್ನಾಗಿ ಒಗ್ಗಿದೆ. ಅದಲ್ಲದೆ, ಈಗ ನಾನು ಬಂಗಾಲಿಗಳೊಬ್ಬರು ಸಿಕ್ಕಿಬಿಟ್ಟರೆಂದು ಅವರ ಮನೆಯಿಂದ ಹೊರಟರೆ, ಅವರೇನೆಂದುಕೊಂಡಾರು? ಇನ್ನೊಮ್ಮೆ ವಿಚಾರಮಾಡಿ ತಿಳಿಸುತ್ತೇನೆ."


ಹರಿಪದ ಮಿತ್ರನ ಮನೆ

ಮಾರನೆಯ ದಿನ, ತನ್ನ ಮನೆಗೆ ಬರಲೇ ಬೇಕೆಂದು ಹರಿಪದಮಿತ್ರ ಸ್ವಾಮೀಜಿಯವರನ್ನು ಕೋರಿಕೊಂಡ. ಸ್ವಾಮೀಜಿಯನ್ನು ಒಪ್ಪಿಸಿ ಬೆಳಗ್ಗೆ ಅವರ ಬರುವಿಕೆಗಾಗಿ ಕಾಯುತ್ತಿದ್ದ. ಗಂಟೆ ಎಂಟಾದರೂ ಸ್ವಾಮೀಜಿ ಬರದಿದ್ದುದನ್ನು ಕಂಡು ತಾನೇ ವಕೀಲರ ಮನೆಗೆ ಹೊರಟ. ಅಲ್ಲಿ ನೋಡುತ್ತಾನೆ, ಅನೇಕ ಜನ ಪಂಡಿತರು, ವಕೀಲರು ಹಾಗೂ ಇತರ ಗಣ್ಯ ವ್ಯಕ್ತಿಗಳಿಂದ ಸುತ್ತುವರಿದು ಸ್ವಾಮೀಜಿ ಕುಳಿತಿದ್ದಾರೆ; ಎಲ್ಲರೂ ಬೇರೆ ಬೇರೆ ವಿಷಯಗಳಿಗೆ ಸಂಬಂಧಿಸಿದಂತೆ ಪ್ರಶ್ನೆಗಳನ್ನು ಕೇಳುತ್ತಿದ್ದಾರೆ. ಅವುಗಳಿಗೆ ಸ್ವಾಮೀಜಿ ನಗುನಗುತ್ತ ಒಮ್ಮೆ ಹಿಂದಿಯಲ್ಲಿ, ಕೆಲವೊಮ್ಮೆ ಇಂಗ್ಲಿಷಿನಲ್ಲಿ, ಮತ್ತೆ ಕೆಲವೊಮ್ಮೆ ಸಂಸ್ಕೃತದಲ್ಲಿ ಉತ್ತರಿಸುತ್ತಿದ್ದಾರೆ. ಅವರಲ್ಲಿ ಒಬ್ಬ ಕೇಳುತ್ತಾನೆ, "ಸ್ವಾಮೀಜಿ, ನಾವು ಬೆಳಗ್ಗೆ ಹಾಗೂ ಸಂಜೆ ಸಂಧ್ಯಾವಂದನೆಯ ಸಮಯದಲ್ಲಿ ಹೇಳುವ ಮಂತ್ರಗಳು ಸಂಸ್ಕೃತದಲ್ಲಿವೆ. ಅವುಗಳೆಲ್ಲ ಒಂದಿಷ್ಟೂ ಅರ್ಥವಾಗುವುದಿಲ್ಲ.. ಅವುಗಳನ್ನು ಸುಮ್ಮನೆ ಹಾಗೆಯೇ ಹೇಳುತ್ತ ಹೋಗುವುದರಿಂದ ನಮಗೇನಾದರೂ ಪ್ರಯೋಜನವಿದೆಯೆ?" ಸ್ವಾಮೀಜಿ ಸಂಶಯಕ್ಕೆ ಎಡೆಯಿಲ್ಲದಂತೆ ಉತ್ತರಿಸುತ್ತಾರೆ, "ಖಂಡಿತವಾಗಿಯೂ ಅವುಗಳಿಂದ ಪ್ರಯೋಜನ ಇದೆ. ಆದರೆ, ಮೊದಲನೆಯದಾಗಿ ಬ್ರಾಹ್ಮಣ ಕುಟುಂಬದಲ್ಲಿ ಹುಟ್ಟಿರುವುದರಿಂದ ಆ ಮಂತ್ರಗಳ ಅರ್ಥವನ್ನು ಸುಲಭವಾಗಿ ಅರಿತುಕೊಳ್ಳಬಹುದಿತ್ತು. ನೀನು ಹಾಗೆ ಮಾಡದಿದ್ದರೆ ಅದು ಯಾರ ತಪ್ಪು? ಹೋಗಲಿ, ಅರ್ಥ ಗೊತ್ತಿಲ್ಲದಿದ್ದರೂ ಸಂಧ್ಯಾ ವಂದನೆಗೆ ಕುಳಿತಾಗ, 'ನಾನು ಮಾಡುತ್ತಿರುವುದು ಪುಣ್ಯದ ಕೆಲಸ, ಪಾಪಕಾರ್ಯವಲ್ಲ' ಎಂದು ನಿನಗೆ ಅನ್ನಿಸುವುದಿಲ್ಲವೆ? ಅಷ್ಟಾದರೆ ಎಷ್ಟೋ ಸತ್ಪರಿಣಾಮವಾಗುತ್ತದೆ." ಹೀಗೆ, ಒಂಬತ್ತು ಗಂಟೆಯವರೆಗೆ ಮಾತುಕತೆಯಾಡಿದ ಮೇಲೆ ಕಛೇರಿಗೆ ಹೋಗುವವರು ಹೊರಟುಹೋದರು. ಈಗ ಸ್ವಾಮೀಜಿಯ ದೃಷ್ಟಿ ಹರಿಪದನ ಮೇಲೆ ಬಿತ್ತು. "ನೋಡು, ಇಷ್ಟು ಜನರಿಗೆ ನಿರಾಶೆಯುಂಟುಮಾಡಿ ಬರಲು ನನಗೆ ಮನಸ್ಸಾಗಲಿಲ್ಲ. ಸಮಯಕ್ಕೆ ತಪ್ಪಿದ್ದಕ್ಕಾಗಿ ಕ್ಷಮಿಸುತ್ತೀಯೆ ಎಂದು ಭಾವಿಸುತ್ತೇನೆ" ಎಂದರು ಸ್ವಾಮೀಜಿ. ಹರಿಪದ, ಸ್ವಾಮೀಜಿಯನ್ನು ತನ್ನ ಮನೆಗೇ ಬಂದು ಇರಬೇಕೆಂದು ಕೇಳಿಕೊಂಡ.

ಸ್ವಾಮೀಜಿ ಮೊದಲು ಒಪ್ಪಲಿಲ್ಲ. ಕೊನೆಗೆ, "ನೀನು ಈ ಮನೆಯವರನ್ನು ಒಪ್ಪಿಸುವುದಾದರೆ ನಾನು ಬರಲು ಸಿದ್ಧ" ಎಂದರು. ಬಹಳ ಕಷ್ಟಪಟ್ಟು ಶ್ರೀ ಭಾಟೆಯವರನ್ನು ಒಪ್ಪಿಸಿ ಸ್ವಾಮೀಜಿಯವರನ್ನು ಹರಿಪದನು ತನ್ನ ಮನೆಗೆ ಕರೆದುಕೊಂಡು ಹೋದನು.

ಹರಿಪದನ ಮನೆಯಲ್ಲಿ ಸ್ವಾಮೀಜಿಯವರ ದಿನಗಳು ನಿರಂತರವಾಗಿ ಚರ್ಚೆಯಲ್ಲಿ ಕಳೆದವು. ಅವನ ಮನಸ್ಸಿನಲ್ಲಿ ಮನೆ ಮಾಡಿದ್ದ ಎಲ್ಲ ಸಂಶಯಗಳನ್ನೂ ಸ್ವಾಮೀಜಿ ಪರಿಹರಿಸಿದರು.

ಸ್ವಾಮೀಜಿ ಮುಗುಳ್ನಗುತ್ತ ಉತ್ತರಿಸಿದರು, "ಒಬ್ಬ ಮನುಷ್ಯ ರಾಜನಾಗಿಬಿಟ್ಟನೆಂದರೆ ಅವನಿಗಿನ್ನು ಬಡತನವೆಂಬುದು ಇರುವುದಿಲ್ಲ. ಆದರೆ ಈಗ ಸಮಸ್ಯೆಯೆಂದರೆ, ಹೇಗೆ ತಾನೆ ರಾಜ ನಾಗುವುದು? ಶ್ರದ್ಧೆಯನ್ನು ಹೊರಗಿನಿಂದ ತರಲು ಸಾಧ್ಯವೇ?

ಯಾರಿಗೇ ಆಗಲಿ, ಸ್ವಂತ ಅನುಭವವಾದ ಹೊರತು ನಿಜವಾದ ಶ್ರದ್ಧೆಯುಂಟಾಗಲು ಸಾಧ್ಯವಿಲ್ಲ."

ಒಂದು ದಿನ ಸ್ವಾಮೀಜಿ, ತಮ್ಮ ಸಂಭಾಷಣೆಯ ಸಮಯದಲ್ಲಿ 'ಪಿಕ್‌ವಿಕ್ ಪೇಪರ್ಸ್' ಎಂಬ ಗ್ರಂಥದ ಎರಡು ಮೂರು ಪುಟಗಳನ್ನು ಅವು ಇದ್ದ ಹಾಗೆಯೇ ಉದ್ಧರಿಸಿದರು. ಹರಿಪದ ಮಿತ್ರನ ಆಶ್ಚರ್ಯಕ್ಕೆ ಪಾರವೇ ಇರಲಿಲ್ಲ. ಸಂನ್ಯಾಸಿಯೊಬ್ಬರು ಇಂತಹ ಲೌಕಿಕ ಸಾಹಿತ್ಯವನ್ನು, ಬಾಯಿಪಾಠ ಮಾಡಿದವರಂತೆ ಉದ್ಧರಿಸುವುದನ್ನು ಆತ ಊಹಿಸಿಯೂ ಇರಲಿಲ್ಲ. ಸ್ವಾಮಿಗಳು ಈ ಗ್ರಂಥವನ್ನು ಬಹಳ ಬಾರಿ ಓದಿರಬೇಕೆಂದುಕೊಂಡು, "ಸ್ವಾಮೀಜಿ, ತಾವು ಇದನ್ನು ಎಷ್ಟು ಬಾರಿ ಓದಿದ್ದೀರಿ?" ಎಂದು ಪ್ರಶ್ನಿಸಿದ. "ಒಟ್ಟು ಎರಡು ಸಲ. ಒಮ್ಮೆ ನಾನು ಶಾಲೆಯಲ್ಲಿ ಓದುತ್ತಿರುವಾಗ, ಇನ್ನೊಮ್ಮೆ ಈಗ ಆರು ತಿಂಗಳ ಕೆಳಗೆ" ಎಂದರು ಸ್ವಾಮೀಜಿ. ಅದನ್ನು ಕೇಳಿ ಮತ್ತೂ ಆಶ್ಚರ್ಯಗೊಂಡು ಕೇಳಿದ, "ಹಾಗಾದರೆ, ಅದೆಲ್ಲ ನಿಮಗೆ ಮಾತ್ರ ನೆನಪಿರುತ್ತದೆ, ನಮಗೇಕೆ ನೆನಪಿರುವುದಿಲ್ಲ?" ಆಗ ಸ್ವಾಮೀಜಿ ವಿವರಿಸಿದರು:

**"ದೈಹಿಕ ಶಕ್ತಿಗಳ ಮೇಲೆ ಹಿಡಿತ ಸಾಧಿಸುವುದರಿಂದ ಮನಶ್ಶಕ್ತಿ ಸಿದ್ಧಿಸುತ್ತದೆ. ದೈಹಿಕ ಶಕ್ತಿಗಳನ್ನು ವ್ಯರ್ಥವಾಗಿ ಉಪಯೋಗಿಸದೆ, ಅದನ್ನು ಮಾನಸಿಕ ಶಕ್ತಿಯಾಗಿ ಪರಿವರ್ತಿಸಿಕೊಳ್ಳಬೇಕು. ಗೊತ್ತುಗುರಿಯಿಲ್ಲದೆ ನಿರ್ಲಕ್ಷ್ಯದಿಂದ ದೈಹಿಕ ಶಕ್ತಿಯನ್ನು ಭೋಗಲಾಲಸೆಗಾಗಿ ಬಳಸುವುದು ಅತ್ಯಂತ ಅಪಾಯಕಾರಿ. ಇದರಿಂದ ಮನಸ್ಸಿನ ಧಾರಣಶಕ್ತಿಯೇ ನಾಶವಾಗಿ ಹೋಗುತ್ತದೆ. ನಾನು ಹಿಂದೆ ಪವಾಹಾರಿ ಬಾಬಾ ಎಂಬ ಮಹಾಸಂತರನ್ನು ಭೇಟಿಯಾಗಿದ್ದೆ. ಅವರು ಜಪಧ್ಯಾನಗಳನ್ನು ಎಷ್ಟು ನಿಷ್ಠೆಯಿಂದ ಮಾಡುತ್ತಿದ್ದರೋ, ಅಷ್ಟೇ ನಿಷ್ಠೆಯಿಂದ ತಮ್ಮ ಹಿತ್ತಾಳೆಯ ಪಾತ್ರೆಯನ್ನೂ ತೊಳೆದು, ಅದನ್ನು ಚಿನ್ನದಂತೆ ಹೊಳೆಯುವ ಹಾಗೆ ಮಾಡುತ್ತಿದ್ದರು."**

ಸ್ವಾಮೀಜಿ ಈ ನಗರಕ್ಕೆ ಬಂದು ನಾಲ್ಕು ದಿನಗಳಾಗಿದ್ದವು. ಆದ್ದರಿಂದ ಅವರು ಹರಿಪದನಿಗೆ ಹೇಳಿದರು, "ಸಂನ್ಯಾಸಿಯಾದವನು ಇಂತಹ ನಗರದಲ್ಲಿ ಮೂರು ದಿನಗಳಿಗಿಂತ ಹಾಗೂ ಹಳ್ಳಿಗಳಲ್ಲಿ ನಾಲ್ಕು ದಿನಗಳಿಗಿಂತ ಹೆಚ್ಚು ವಾಸಿಸಬಾರದು. ನಾನು ಕೂಡಲೇ ಹೊರಡಬೇಕು." ತುಂಬ ಒತ್ತಾಯದ ಮೇರೆಗೆ ಸ್ವಾಮೀಜಿ ಇನ್ನೆರಡು ದಿನಗಳು ಅಲ್ಲಿರಲು ಸಮ್ಮತಿಸಿದರು.

ಸ್ವಲ್ಪ ಕಾಲದಿಂದ ಹರಿಪದನ ಪತ್ನಿ ಯಾರಾದರೂ ಗುರುವಿನ ಮೂಲಕ ಮಂತ್ರದೀಕ್ಷೆ ಸ್ವೀಕರಿಸಬೇಕೆಂಬ ಬಯಕೆಯನ್ನು ಪತಿಯ ಮುಂದಿಟ್ಟಿದ್ದಳು. ಅದಕ್ಕೆ ಹರಿಪದನು, "ನೀನು ಎಂಥ ಗುರುವನ್ನು ಆರಿಸಿಕೊಳ್ಳಬೇಕೆಂದರೆ ಅವನು ನನ್ನ ಗೌರವಕ್ಕೂ ಪಾತ್ರನಾಗುವ ಸಾಮರ್ಥ್ಯವನ್ನು ಪಡೆದಿರಬೇಕು. ಆ ಗುರು ಮನೆಗೆ ಬಂದರೇನೇ ನನ್ನಲ್ಲಿ ಕಿರಿಕಿರಿ ಉಂಟುಮಾಡುವಂತಿದ್ದರೆ ಅಂಥ ಗುರುವಿನಿಂದ ನಿನಗೇನೂ ಸಂತೋಷವಾಗದು, ಪ್ರಯೋಜನವೂ ಆಗದು. ನಮಗೆ ಒಳ್ಳೆಯ ವ್ಯಕ್ತಿ ದೊರೆತರೆ ನಾವಿಬ್ಬರೂ ದೀಕ್ಷೆ ಸ್ವೀಕರಿಸೋಣ. ಇಲ್ಲದಿದ್ದರೆ ಇಲ್ಲ" ಎಂದಿದ್ದ. ಇದೀಗ ಅವರ ಮನಸ್ಸಿಗೆ ಒಪ್ಪುವಂತಹ ವ್ಯಕ್ತಿಯೊಬ್ಬರು ಅವರೆದುರಿಗಿದ್ದಾರೆ. ತನ್ನ ಪತ್ನಿಯನ್ನು, "ಸ್ವಾಮೀಜಿಯವರಿಂದ ಮಂತ್ರದೀಕ್ಷೆ ಪಡೆಯಲು ಇಷ್ಟವಿದೆಯೆ?" ಎಂದು ಕೇಳಿದ. "ಇಷ್ಟವೇನೋ ಖಂಡಿತ ಇದೆ. ಆದರೆ ಅವರು ನಮ್ಮ ಗುರುಗಳಾಗಲು ಒಪ್ಪಿಯಾರೆ?" ಎಂದಳಾಕೆ. "ಪ್ರಯತ್ನ ಮಾಡಿ ನೋಡೋಣ. ಇದನ್ನು ಬಿಟ್ಟರೆ ಇಂತಹ ಅವಕಾಶ ಮತ್ತೆಂದೂ ಸಿಗದು." ಬಳಿಕ ಹರಿಪದ ಬಾಬು ಬಹಳ ಹಿಂಜರಿಯುತ್ತಲೇ ಸ್ವಾಮೀಜಿಯ ಮುಂದೆ ತನ್ನ ಮನದಾಳದ ಬಯಕೆಯನ್ನು ಹೇಳಿಕೊಂಡ. ಮೊದಲು ಸ್ವಾಮೀಜಿ ಅನೇಕ ನೆಪಗಳನ್ನು ಒಡ್ಡಿ ಆ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸಿದರು. ಆದರೆ ತಾನು ಹಿಡಿದ ಪಟ್ಟನ್ನು ಅವನೂ ಬಿಡಲಿಲ್ಲ. ಕೊನೆಗೆ ಅವನ ಅವಿಚಲ ನಿರ್ಧಾರವನ್ನು ಕಂಡ ಸ್ವಾಮೀಜಿ ೧೮೯೨, ಅಕ್ಟೋಬರ್ ೨೫ ರಂದು ಅವನಿಗೂ ಅವನ ಪತ್ನಿಗೂ ಮಂತ್ರದೀಕ್ಷೆಯನ್ನು ನೀಡಿದರು. ಅವರ ಭಾವಚಿತ್ರವೊಂದನ್ನು ತೆಗೆದುಕೊಳ್ಳಬೇಕೆಂದು ಸ್ವಾಮೀಜಿಯವರನ್ನು ಕೇಳಿಕೊಂಡ. ಸ್ವಾಮೀಜಿ ಒಪ್ಪಲಿಲ್ಲ. ಬಹಳ ಹೆಣಗಾಡಿ ಅವರ ಮನವೊಲಿಸಿ ೨೮.೧೦.೧೮೯೨ ರಂದು ಅವರ ಒಂದು ಫೋಟೋ ತೆಗೆಸಿದ (ಪುಟ ೮೩ ನೋಡಿ).

ಹರಿಪದನ ಮನೆಯಲ್ಲಿ ಸ್ವಾಮೀಜಿ ಇನ್ನೂ ಅನೇಕ ವಿಷಯಗಳ ಕುರಿತು ಹಲವಾರು ಚರ್ಚೆಗಳನ್ನು ನಡೆಸಿದರು. ಅವೆಲ್ಲ ಅತ್ಯಂತ ಸ್ವಾರಸ್ಯಕರವಾಗಿವೆ. ಸಾಮಾಜಿಕ, ರಾಜಕೀಯ, ನೈತಿಕ ವಿಷಯಗಳಿಗೆ ಸಂಬಂಧಿಸಿದಂತೆ ಸ್ವಾಮೀಜಿಯವರ ಅಭಿಪ್ರಾಯಗಳ ಸ್ಪಷ್ಟ ಪರಿಚಯ ನಮಗೆ ಇಲ್ಲಿ ಉಂಟಾಗುತ್ತದೆ. ಕಡೆಗೆ ಅಕ್ಟೋಬರ್ ೨೭ ರಂದು ಸ್ವಾಮೀಜಿ, "ನಾನಿನ್ನು ಇರಲು ಸಾಧ್ಯವಾಗದು. ರಾಮೇಶ್ವರದ ಕಡೆ ಹೊರಟೆ " ಎಂದು ಹೊರಟುನಿಂತರು. ಅವರನ್ನು ಇನ್ನು ಉಳಿಸಿಕೊಳ್ಳಲಾರದೆ, ಹರಿಪದ ಮರ್ಮಗೋವಾಕ್ಕೆ ರೈಲು ಟಿಕೆಟ್ ಖರೀದಿಸಿಕೊಟ್ಟ.

## ಬೆಂಗಳೂರು–ಮೈಸೂರುಗಳಲ್ಲಿ

ಬೆಳಗಾವಿಯಿಂದ ಸ್ವಾಮೀಜಿ ಮರ್ಮಗೋವಾಗೆ ಹೋಗಿ, ಅಲ್ಲಿಂದ ಧಾರವಾಡದ ಮೂಲಕ ಬೆಂಗಳೂರಿಗೆ ಬಂದಿಳಿದರು. ಅಲ್ಲಿ ಮುನ್ಸಿಪಲ್ ಮೆಡಿಕಲ್ ಆಫಿಸರ್ ಆದ ಡಾ. ಪಿ. ಪಲ್ಪು ಅವರ ಅತಿಥಿಯಾಗಿ ಉಳಿದುಕೊಂಡರು. ಇವರು ಕೇರಳದ ಈಡಿಗ ಜನಾಂಗಕ್ಕೆ ಸೇರಿದವರು. ಇವರಿಗೆ ತಕ್ಕ ಅರ್ಹತೆಗಳಿದ್ದರೂ ಜಾತೀಯತೆಯ ಪೂರ್ವಗ್ರಹದ ದೆಸೆಯಿಂದಾಗಿ ಸ್ವಂತ ಸ್ಥಳವಾದ ಕೇರಳದಲ್ಲಿ ಸರ್ಕಾರಿ ಉದ್ಯೋಗ ಸಿಕ್ಕಿರಲಿಲ್ಲ. ಆದ್ದರಿಂದ ಅವರು ಮೈಸೂರು ರಾಜ್ಯಕ್ಕೆ ಬಂದು, ಯೋಗ್ಯ ಉದ್ಯೋಗವೊಂದನ್ನು ಪಡೆದುಕೊಂಡಿದ್ದರು. ಇವರ ಮೂಲಕ ಸ್ವಾಮೀಜಿಗೆ ಕೇರಳದಲ್ಲಿ ಪ್ರಚಲಿತವಿದ್ದ ಭಯಂಕರ ಸಾಮಾಜಿಕ ಪರಿಸ್ಥಿತಿಯ ಚಿತ್ರ ಸಿಕ್ಕಿತು. ಮೇಲ್ಜಾತಿಯವರು ಕೆಳಜಾತಿಯವರನ್ನು ತುಳಿಯುತ್ತಿದ್ದ ರೀತಿ, ಈ ಪರಿಸ್ಥಿತಿಯ ಸಂಪೂರ್ಣ ಲಾಭವನ್ನು ಪಡೆದುಕೊಂಡ ಕ್ರೈಸ್ತ ಮತಪ್ರಚಾರಕರು, ಕೆಳಜಾತಿಯ ಜನರನ್ನು



ಮೈಸೂರಿನ ನಿರಂಜನ ಮಠ

ಲಕ್ಷಗಟ್ಟಲೆ ಸಂಖ್ಯೆಯಲ್ಲಿ ಕ್ರೈಸ್ತರನ್ನಾಗಿ ಮತಾಂತರಿಸುತ್ತಿದ್ದುದು– ಇದನ್ನೆಲ್ಲ ಚರ್ಚಿಸಿದ ಸ್ವಾಮೀಜಿ ತಮ್ಮದೇ ಆದ ಒಂದು ಪರಿಹಾರವನ್ನು ಸೂಚಿಸಿದರು: "ನೀವೆಲ್ಲ ಬ್ರಾಹ್ಮಣರ ಹಿಂದೆ ಅಂಗಲಾಚಿಕೊಂಡು ಹೋಗುವುದೇಕೆ? ನಿಮ್ಮಲ್ಲೇ ಉನ್ನತ ಮಟ್ಟದ ಯೋಗ್ಯವ್ಯಕ್ತಿಯೊಬ್ಬರನ್ನು ನಾಯಕನನ್ನಾಗಿ ಮಾಡಿ ಕೊಂಡು ಎಲ್ಲರೂ ಅವರನ್ನು ಅನುಸರಿಸಿ. ಆಗ ನಿಮ್ಮ ಎಷ್ಟೋ ಸಮಸ್ಯೆಗಳು ಪರಿಹಾರವಾಗುತ್ತವೆ." ಮುಂದೆ, ಡಾ. ಪಲ್ಪುರವರು ಸ್ವಾಮೀಜಿಯವರು ನೀಡಿದ ಸಲಹೆಯನ್ನು ಗಂಭೀರವಾಗಿ ಸ್ವೀಕರಿಸಿ, ಶ್ರೀ ನಾರಾಯಣ ಗುರು ಎಂಬುವವರನ್ನು ತಮ್ಮ ಗುರುಗಳಾಗಿ ಸ್ವೀಕರಿಸಿದರು.

ಬೆಂಗಳೂರಿಗೆ ಬಂದ ಸ್ವಲ್ಪ ದಿನಗಳಲ್ಲಿ ಸ್ವಾಮೀಜಿಗೆ ಮೈಸೂರು ರಾಜ್ಯದ ದಿವಾನರಾದ ಸರ್ ಕೆ. ಶೇಷಾದ್ರಿ ಅಯ್ಯರ್‌ರವರ ಪರಿಚಯವಾಯಿತು. ಸ್ವಾಮೀಜಿಯವರೊಡನೆ ಸಂಭಾಷಣೆ ನಡೆಸಿದ ಕೆಲವೇ ನಿಮಿಷಗಳಲ್ಲಿ ಅಯ್ಯರ್ ಅವರಿಗೆ ಸ್ವಾಮೀಜಿಯವರ ಘನವ್ಯಕ್ತಿತ್ವದ ಪರಿಚಯವಾಯಿತು. ಈ ಯುವ ಸಂನ್ಯಾಸಿಯು ತನ್ನ ಅಯಸ್ಕಾಂತೀಯ ವ್ಯಕ್ತಿತ್ವ ಹಾಗೂ ಅಪಾರ ಆಧ್ಯಾತ್ಮಿಕ ಶಕ್ತಿಗಳಿಂದ ಇಡೀ ಭಾರತದ ಇತಿಹಾಸದ ಮೇಲೆ ತನ್ನ ಅಚ್ಚಳಿಯದ ಪ್ರಭಾವವನ್ನು ಬೀರುವರೆಂಬುದನ್ನು ಅವರು ಕಂಡುಕೊಂಡರು. ದಿವಾನರು ಸ್ವಾಮಿಗಳನ್ನು ಮೈಸೂರಿನ ತಮ್ಮ ಮನೆಗೆ ಆಹ್ವಾನಿಸಿದರು. ಅಲ್ಲಿ ಸ್ವಾಮೀಜಿ ಸುಮಾರು ಎರಡು–ಮೂರು ವಾರಗಳ ಕಾಲ ದಿವಾನರ ಅತಿಥಿಯಾಗಿದ್ದರು. ಶೇಷಾದ್ರಿ ಅಯ್ಯರ್ ಅವರ ಮೇಲೆ ಸ್ವಾಮೀಜಿಯವರ ವ್ಯಕ್ತಿತ್ವ ಎಷ್ಟು ಪ್ರಭಾವ ಬೀರಿತ್ತೆಂದರೆ ಅವರೇ ಒಮ್ಮೆ ಈ ರೀತಿ ಹೇಳುತ್ತಾರೆ, "ನಮ್ಮಲ್ಲೂ ಎಷ್ಟೋ ಜನ ಶಾಸ್ತ್ರಗಳನ್ನು ಓದಿದವರಿದ್ದಾರೆ. ಆದರೆ ಅದರಿಂದೇನಾಯಿತು? ಈ ಯುವ ಸಂನ್ಯಾಸಿಯ ಅಸಾಧಾರಣ ಜ್ಞಾನ ಹಾಗೂ ಅಂತರ್ದೃಷ್ಟಿ ನಾನು ಈವರೆಗೆ ಭೇಟಿಮಾಡಿದ ಪಂಡಿತರೆಲ್ಲರ ತಿಳಿವಳಿಕೆಯನ್ನೂ ಮೀರಿಸುತ್ತವೆ. ನಿಜಕ್ಕೂ ಇದು ಪರಮಾದ್ಭುತ. ಹುಟ್ಟುವಾಗಲೇ ಇವರು ತಮ್ಮ ಈ ಅಪಾರ ಜ್ಞಾನವನ್ನು ಪಡೆದುಕೊಂಡು ಬಂದಿರಬೇಕು. ಇಲ್ಲದಿದ್ದರೆ ಇಷ್ಟು ಚಿಕ್ಕ ವಯಸ್ಸಿನಲ್ಲೇ ಇಷ್ಟೆಲ್ಲ ಜ್ಞಾನವನ್ನು ಪಡೆದುಕೊಳ್ಳಲು ಹೇಗೆ ಸಾಧ್ಯ?"

ಶೇಷಾದ್ರಿ ಅಯ್ಯರಿಗೆ ಈ ಯುವ ಸಂನ್ಯಾಸಿಯನ್ನು ಮೈಸೂರು ಸಂಸ್ಥಾನದ ಮಹಾರಾಜರಾದ ಶ್ರೀ ಚಾಮರಾಜ ಒಡೆಯರಿಗೆ ಪರಿಚಯಿಸಲೇ ಬೇಕು ಅನ್ನಿಸಿತು. ಇವರಿಬ್ಬರ ಭೇಟಿ ಪರಸ್ಪರ ಲಾಭಪ್ರದವಾದೀತೆಂದು ಮನಗಂಡು ಸ್ವಾಮಿಗಳನ್ನು ಅರಮನೆಗೆ ಕರೆದೊಯ್ದರು. ಅಲ್ಲಿ ಮಹಾರಾಜರಿಗೆ ಸ್ವಾಮೀಜಿಯವರನ್ನು ಪರಿಚಯಿಸಿದರು. ಅವರ ನೂತನ ವಿಚಾರಧಾರೆ, ಶಾಸ್ತ್ರಗಳನ್ನು ವಿಶ್ಲೇಷಿಸುವ ಸೂಕ್ಷ್ಮದೃಷ್ಟಿ, ಆಕರ್ಷಕ ವ್ಯಕ್ತಿತ್ವ, ಬೆರಗಾಗಿಸುವ ಬುದ್ಧಿಮತ್ತೆಗಳನ್ನು ಕಂಡು ಮಹಾರಾಜರು ಮನಸೋತರು. ಸ್ವಾಮೀಜಿಯವರನ್ನು ತಮ್ಮ ಅತಿಥಿಯಾಗಿರುವಂತೆ ಅತ್ಯಂತ ವಿನಯದಿಂದ ಕೇಳಿಕೊಂಡು ಒಪ್ಪಿಸಿದರು. ಸ್ವಾಮೀಜಿ ಮೈಸೂರು ರಾಜ್ಯದ ಗೌರವ ಅತಿಥಿಯಾಗಿ ಅರಮನೆಯಲ್ಲಿ ಉಳಿದುಕೊಂಡರು. ಮಹಾರಾಜರು ಹಲವಾರು ಸಲ ಅವರನ್ನು ಭೇಟಿ ಮಾಡಿ ವಿವಿಧ ವಿಷಯಗಳ ಕುರಿತು ಚರ್ಚೆಗಳನ್ನು ನಡೆಸಿ, ಸಲಹೆ ಪಡೆದರು.

ಒಂದು ದಿನ ಮೈಸೂರಿನ ಒಬ್ಬ ಶಾಸಕನಾಗಿದ್ದ ಅಬ್ದುಲ್ ರಹಮಾನ್ ಸಾಹೇಬ್ ಎಂಬಾತ ಸ್ವಾಮೀಜಿಯವರ ಬಳಿ ಬಂದು ಮಾತನಾಡಿದಾಗ ಅವರಿಗೆ ಕುರಾನಿನ ಬಗ್ಗೆ ಆಳವಾದ ಜ್ಞಾನವಿರುವುದನ್ನು ಕಂಡುಕೊಂಡ. ಒಬ್ಬ ಹಿಂದೂ ಸಂನ್ಯಾಸಿ ಮುಸ್ಲಿಂ ಧರ್ಮಗ್ರಂಥದಲ್ಲಿ ಪರಿಣತಿ ಪಡೆದಿರುವುದನ್ನು ಕಂಡು ಅಲ್ಲಿದ್ದವರಿಗೆಲ್ಲ ಆಶ್ಚರ್ಯ. ಆ ಮುಸಲ್ಮಾನ, ಸ್ವಾಮೀಜಿಯೊಂದಿಗೆ ಸಂಭಾಷಣೆ ನಡೆಸಿ ಕುರಾನಿನ ಕೆಲವು ವಿಷಯಗಳ ಬಗ್ಗೆ ತನಗಿದ್ದ ಸಂಶಯಗಳನ್ನು ಪರಿಹರಿಸಿಕೊಂಡ. ಮೈಸೂರು ಅರಮನೆಯಲ್ಲಿದ್ದಾಗ ಆಸ್ಟ್ರಿಯಾ ದೇಶದ ಖ್ಯಾತ ಸಂಗೀತಗಾರನೊಬ್ಬನನ್ನು ಭೇಟಿ ಮಾಡುವ ಅವಕಾಶ ಒದಗಿತು. ಅವನೊಂದಿಗೆ ಸ್ವಾಮೀಜಿ ಪಾಶ್ಚಾತ್ಯ ಸಂಗೀತದ ಬಗ್ಗೆ ಮಾತನಾಡಿದರು. ಅವರಿಗೆ ಪಾಶ್ಚಾತ್ಯ ಸಂಗೀತದ ವಿಷಯದಲ್ಲೂ

ಇದ್ದ ಪರಿಣತಿಯನ್ನು ಕಂಡು ಎಲ್ಲರೂ ಬೆರಗಾದರು. ಇನ್ನೊಮ್ಮೆ ಸ್ವಾಮೀಜಿ, ಅರಮನೆಯ ವಿದ್ಯುದೀಕರಣದಲ್ಲಿ ತೊಡಗಿದ್ದ ತಂತ್ರಜ್ಞನೊಬ್ಬನನ್ನು ಸಂಧಿಸಿ, ವಿದ್ಯುಚ್ಛಕ್ತಿಯ ವಿಷಯದ ಕುರಿತು ಸಂಭಾಷಣೆ ನಡೆಸಿದರು. ಆ ವಿಷಯದಲ್ಲೂ ಸ್ವಾಮೀಜಿ ತಂತ್ರಜ್ಞನನ್ನೇ ಮೀರಿಸಿದ್ದು ಸ್ಪಷ್ಟವಾಗಿತ್ತು.

ಸ್ವಾಮೀಜಿಯವರು ಮೈಸೂರಿನಲ್ಲಿರುವಾಗಲೇ ಒಮ್ಮೆ ಅರಮನೆಯಲ್ಲಿ ವಿದ್ವದ್ಗೋಷ್ಠಿಯೊಂದು ನಡೆಯಿತು. ಇದರಲ್ಲಿ ಅನೇಕ ಹೆಸರಾಂತ ಪಂಡಿತರು ಭಾಗವಹಿಸಿದ್ದರು. ಸಭೆಯ ಅಧ್ಯಕ್ಷಸ್ಥಾನದಲ್ಲಿದ್ದ ದಿವಾನರು ಸ್ವಾಮೀಜಿಯವರನ್ನೂ ಸಭೆಗೆ ಆಹ್ವಾನಿಸಿದ್ದರು. ವೇದಾಂತದ ಬಗ್ಗೆ ಸಂಸ್ಕೃತದಲ್ಲಿ ಚರ್ಚೆ ನಡೆಯಿತು. ಎಷ್ಟು ಹೊತ್ತು ಚರ್ಚಿಸಿದರೂ ಯಾವ ಒಂದು ತೀರ್ಮಾನಕ್ಕೂ ಬರುವ ಸೂಚನೆ ಕಾಣದಾದಾಗ ದಿವಾನರು ಈ ವಿಷಯವಾಗಿ ಸ್ವಾಮೀಜಿಯ ನಿಲುವನ್ನು ತಿಳಿಸುವಂತೆ ಕೇಳಿಕೊಂಡರು. ಆಗ ಸ್ವಾಮೀಜಿ ಅಸ್ಖಲಿತ ವಾಣಿಯಲ್ಲಿ ಸಂಸ್ಕೃತದಲ್ಲಿ ವಿವರಿಸತೊಡಗಿದರು. ತಾವು ವಿಶ್ವವೇದಿಕೆಯ ಮೇಲೆ ನಿಂತು ಮುಂದೆ ಸಾರಲಿರುವ ವೇದಾಂತ ಸಂದೇಶ ವನ್ನು, ತಮ್ಮ ವೈಶಿಷ್ಟ್ಯಪೂರ್ಣ ಶೈಲಿಯಲ್ಲಿ, ಸಮಸ್ಯೆಯ ಪರಿಹಾರಕ್ಕೆ ಹೊಸ ಆಯಾಮವನ್ನು ನೀಡುತ್ತ, ತಮ್ಮ ಅಭಿಪ್ರಾಯವನ್ನು ಮುಂದಿಟ್ಟರು. ಪಂಡಿತರೆಲ್ಲ ಏಕಕಂಠದಿಂದ ಅದಕ್ಕೆ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು.

ಒಂದು ದಿನ ಮಹಾರಾಜರು ದಿವಾನರ ಸಮ್ಮುಖದಲ್ಲಿ ಸ್ವಾಮೀಜಿಯವರನ್ನು ಕೇಳಿದರು, "ಸ್ವಾಮೀಜಿ, ನಾನು ನಿಮಗಾಗಿ ಏನು ಮಾಡಲಿ?" ಈ ಪ್ರಶ್ನೆಗೆ ಸ್ವಾಮೀಜಿ ನೇರವಾಗಿ ಉತ್ತರಿಸದೆ, ತಾವು ಮುಂದೆ ಸಾಧಿಸಬೇಕಾದ ಕಾರ್ಯೋದ್ದೇಶದ ಬಗ್ಗೆ ಉಜ್ಜಲವಾಗಿ ಮಾತನಾಡತೊಡಗಿದರು. ಸುಮಾರು ಒಂದು-ಒಂದೂವರೆ ಗಂಟೆಗಳ ಕಾಲ ಮಾತನಾಡಿದ ಸ್ವಾಮೀಜಿ, ದೇಶದ ಪರಿಸ್ಥಿತಿಯನ್ನು ಮನಮುಟ್ಟುವಂತೆ ವರ್ಣಿಸುತ್ತ ಹೇಳಿದರು:

> "ಮಹಾರಾಜ, ನಮ್ಮ ಭಾರತಭೂಮಿಯು ಅನಾದಿಯಿಂದ ಪಡೆದುಕೊಂಡು ಬಂದ ಆಸ್ತಿ ಯಾವುದೆಂದರೆ ಉನ್ನತ ತಾತ್ತ್ವಿಕ ಹಾಗೂ ಆಧ್ಯಾತ್ಮಿಕ ಮೌಲ್ಯಗಳು. ಈಗ ಅದಕ್ಕೆ ಬೇಕಾಗಿರುವುದು ಆಧುನಿಕ ವಿಜ್ಞಾನದ ಜೋಡಣೆ. ಭಾರತದಲ್ಲಿ ಅಡಿಯಿಂದ ಮುಡಿಯವರೆಗೆ ರಚನಾತ್ಮಕ ಸುಧಾರಣೆಗಳನ್ನು ತರಬೇಕಾಗಿದೆ.... ನಾನು ವೇದಾಂತ ಪ್ರಚಾರಕ್ಕಾಗಿ ಅಮೆರಿಕೆಗೆ ಹೋಗಬೇಕೆಂದುಕೊಂಡಿದ್ದೇನೆ. ಪಾಶ್ಚಾತ್ಯ ರಾಷ್ಟ್ರಗಳು ಭಾರತೀಯರಿಗೆ ಆಧುನಿಕ ಕೃಷಿವಿಜ್ಞಾನ, ಕೈಗಾರಿಕೆ ಹಾಗೂ ಇತರ ತಾಂತ್ರಿಕ ವಿಷಯಗಳಲ್ಲಿ ಶಿಕ್ಷಣ ನೀಡಿ ನಮ್ಮ ಆರ್ಥಿಕ ಪರಿಸ್ಥಿತಿಯನ್ನು ಅಭಿವೃದ್ಧಿಪಡಿಸುವಲ್ಲಿ ನೆರವಾಗಬೇಕೆಂದು ನಾನು ನಿರೀಕ್ಷಿಸುತ್ತೇನೆ."

ಸ್ವಾಮೀಜಿಯ ಮಾತುಗಳನ್ನು ಕೇಳಿ ಮಹಾರಾಜರು ಮಂತ್ರಮುಗ್ಧರಾದರು. ಎಲ್ಲವನ್ನೂ ತೊರೆದ ಸಂನ್ಯಾಸಿಯೊಬ್ಬ ತನ್ನ ಮಾತೃಭೂಮಿಗಾಗಿ ಕಳಕಳಿ ವ್ಯಕ್ತಪಡಿಸುವುದನ್ನು ಕಂಡು ಅವರ ಹೃದಯ ತುಂಬಿ ಬಂತು. ಸ್ವಾಮೀಜಿ ಅಮೆರಿಕೆಗೆ ಹೋಗುವುದಾದರೆ ಅವರ ಎಲ್ಲ ಖರ್ಚನ್ನು ತಾವೇ ವಹಿಸಿಕೊಳ್ಳುವುದಕ್ಕೆ ಮುಂದಾದರು. ಆದರೆ ಸ್ವಾಮೀಜಿ, "ಈಗಲೇ ಬೇಡ" ಎಂದು ಆ ಹಣವನ್ನು ನಿರಾಕರಿಸಿಬಿಟ್ಟರು.

ಒಂದು ದಿನ ಅರಮನೆಯಲ್ಲಿ ಸ್ವಾಮೀಜಿಯ ನೆನಪಿಗಾಗಿ ಅವರ ಕಂಠಧ್ವನಿಯನ್ನು ಗ್ರಾಮಾಫೋನ್ ಯಂತ್ರದಲ್ಲಿ ಧ್ವನಿಮುದ್ರಣ ಮಾಡಿಕೊಳ್ಳಲಾಯಿತು. ಆದರೆ, ಈಗ ಅದು ಲಭ್ಯವಿಲ್ಲ! ಸ್ವಾಮೀಜಿಯ ಬಗ್ಗೆ ಮಹಾರಾಜರಿಗೆ ಎಷ್ಟು ಭಕ್ತಿ-ಗೌರವಗಳು ಬೆಳೆದುಬಿಟ್ಟಿತ್ತೆಂದರೆ, ಅವರ ಪಾದಪೂಜೆ ಮಾಡಲು ಅನುಮತಿ ಕೇಳಿದರು. ಸ್ವಾಮೀಜಿ ಅದಕ್ಕೆ ಒಪ್ಪಲಿಲ್ಲ. ಮಹಾರಾಜರು ಸ್ವಾಮೀಜಿಗೆ ಅತ್ಯಂತ ಬೆಲೆಬಾಳುವ ಉಡುಗೊರೆಯನ್ನು ಕೊಡಬೇಕೆಂದು ಬಯಸಿದರು. ಸ್ವಾಮೀಜಿ ಏನನ್ನೂ ಸ್ವೀಕರಿಸಲಿಲ್ಲ. ಕಡೆಗೆ ಮಹಾರಾಜರ ಒತ್ತಾಯದ ಮೇರೆಗೆ ಲೋಹವಲ್ಲದ ವಸ್ತುವಿನಿಂದ ಮಾಡಿದ ಹುಕ್ಕಾವನ್ನು ಕೊಡಬಹುದೆಂದು ಹೇಳಿದರು. ಅವರಿಗಾಗಿ ಸುಂದರ ಕೆತ್ತನೆಯುಳ್ಳ ಬೀಟೆಮರದ ಹುಕ್ಕಾವನ್ನು ಉಡುಗೊರೆಯಾಗಿ ನೀಡಲಾಯಿತು. ಹೊರಟು ನಿಂತ ಸ್ವಾಮೀಜಿಯ ಜೇಬಿಗೆ ದಿವಾನರು ನೋಟುಗಳ ಕಂತೆಯೊಂದನ್ನು ತುರುಕಲು ನೋಡಿದರು. ಆದರೆ ಯಶಸ್ವಿಯಾಗಲಿಲ್ಲ. ಕಡೆಗೆ ಅವರನ್ನು ಅತ್ಯಂತ ವಿನಂತಿಸಿಕೊಂಡ ಮೇಲೆ, "ನೀವು ನನಗೋಸ್ಕರ ಏನಾದರೂ ಮಾಡಲೇಬೇಕು ಎಂದಿದ್ದರೆ ನನಗೊಂದು ರೈಲು ಟಿಕೆಟ್ಟು ತೆಗೆಸಿಕೊಡಿ" ಎಂದರು. ದಿವಾನರು ಅವರಿಗೋಸ್ಕರ ಕೇರಳದ ಶೊರನೂರಿಗೆ ಎರಡನೆಯ ದರ್ಜೆ ಟಿಕೆಟ್ಟನ್ನು ತರಿಸಿಕೊಟ್ಟು, ಅಲ್ಲಿನ ದಿವಾನರಾದ ಶಂಕರಯ್ಯ ಎಂಬುವವರಿಗೆ ಪರಿಚಯಪತ್ರವೊಂದನ್ನು ಬರೆದುಕೊಟ್ಟರು.

ಸ್ವಾಮೀಜಿ ಮೈಸೂರಿನಲ್ಲಿದ್ದಾಗ ಅನೇಕ ಸಾರ್ವಜನಿಕ ಭಾಷಣಗಳನ್ನು ನೀಡಿದ್ದರೆಂಬ ವಿಷಯ ಬೆಳಕಿಗೆ ಬಂದಿದೆ. ಅವುಗಳ ವಿವರ ನಮಗೆ ಲಭ್ಯವಿಲ್ಲದಿದ್ದರೂ ಅಲ್ಲಿನ ಸದ್ವಿದ್ಯಾ ಪಾಠಶಾಲೆಯಲ್ಲಿ ಪಂಡಿತರನ್ನು ಮತ್ತು ಸಾರ್ವಜನಿಕರನ್ನು ಉದ್ದೇಶಿಸಿ ಹಲವು ಪ್ರವಚನಗಳನ್ನು ನೀಡಿದರೆಂಬುದಾಗಿ ಶಾಲೆಯ ಪುರಾತನ ದಾಖಲೆಗಳಿಂದ ತಿಳಿಯುತ್ತದೆ. ಇಲ್ಲಿನ ನಿರಂಜನಮಠದಲ್ಲೂ ಸ್ವಾಮೀಜಿ ವಾಸ್ತವ್ಯ ಹೂಡಿದ್ದರು ಎಂಬುದಾಗಿ ಇತ್ತೀಚೆಗೆ ನಡೆದ ಸಂಶೋಧನೆಗಳಿಂದ ದೃಢಪಟ್ಟಿದ್ದು, ಆ ಸ್ಥಳವನ್ನು ಒಂದು ರಾಷ್ಟ್ರೀಯ ಸ್ಮಾರಕವನ್ನಾಗಿ ಮಾಡಲು ಹಾಗೂ ಅಲ್ಲಿ ವಿವೇಕಾನಂದರ ಹೆಸರಿನಲ್ಲಿ ಸಾಂಸ್ಕೃತಿಕ ಕೇಂದ್ರವೊಂದನ್ನು ಸ್ಥಾಪಿಸಲು ಕರ್ನಾಟಕ ಸರಕಾರ ೫ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದೆ.

ಆಧಾರ ಗ್ರಂಥಗಳು: ೧. ಕನ್ನಡದ ನೆಲದಲ್ಲಿ ಸ್ವಾಮಿ ವಿವೇಕಾನಂದ: ಸ್ವಾಮಿ ಪುರುಷೋತ್ತಮಾನಂದ ; ೨. ಸ್ವಾಮಿ ವಿವೇಕಾನಂದರ ದಿವ್ಯಸ್ಮೃತಿ; ೩. The Life of Swami Vivekananda by His Eastern and Western Disciples.